

ತಪ್ಪಿಸಿಕೊಂಡು ಓಡದಿದ್ದರೆ ಅವತ್ತು ನನಗೆ ಗ್ರಹಚಾರ ಅಡಕಾಯಿಸಿಕೊಂಡಿತ್ತು. ಇಂತಹ ಕಥೆಗಳ ಹೇಳುತ್ತಾ ಹೋದರೆ ಒಂದು ದೊಡ್ಡ ಮಂಗಪುರಾಣವೇ ಆದೀತು!

ನಮ್ಮ ಆಗುಂಬೆಯ ಘಾಟಿಯಲ್ಲೂ ಕೆಲದಿನಗಳ ಮಟ್ಟಿಗೆ ಕಾಣಸಿಗುವ ಈ ಸಿಂಹಬಾಲದ ಕೋತಿಗಳು ದಾರಿಹೋಕರ ಎದುರು ಕೈಚಾಚಿ ನಿಲ್ಲುವ ಅಭ್ಯಾಸ ಬೆಳೆಸಿಕೊಂಡಿವೆ. ಯಾವುದೇ ಕಾರು ತಿರುವಿನಲ್ಲಿ ಕೊಂಚ ನಿಧಾನವಾದರೂ ಸಾಕು ದೈನೇಸಿಯಾಗಿ ಎದ್ದು ನಿಲ್ಲುತ್ತವೆ. ತಮಿಳುನಾಡಿನ ಇಲ್ಲವೇ ಕೇರಳದ ಭಾಗದ ಸಿಂಹಬಾಲದ ಕೋತಿಗಳು ಇಲ್ಲೀತನಕ ವಲಸೆ ಬರುತ್ತವೆಯೋ? ಅಥವಾ ಇವು ಸ್ಥಳೀಯ ಪ್ರತಿಭೆಗಳೋ ನನಗೂ ಗೊತ್ತಿಲ್ಲ. ಕೆಲ ದಿನ ಇಲ್ಲಿನ ಟಾರು ರಸ್ತೆಯ ಕಾದು ಮತ್ತೆ ತಿಂಗಳಾನುಗಟ್ಟಲೆ ನಾಪತ್ತೆಯಾಗುವ ಇವು ಎಲ್ಲಿಗೆ ಹೋಗುತ್ತವೆ? ನಡುವೆ ಆಹಾರಕ್ಕಾಗಿ ಯಾವ ರೀತಿ ಹೋರಾಟ ನಡೆಸುತ್ತವೆಯೋ ಗೊತ್ತಿಲ್ಲ. ಹೆಚ್ಚೆಚ್ಚು ಕಾಡಿನ ಆಹಾರವನ್ನೂ ನೆಚ್ಚಿಕೊಂಡು ಬೇಜಾರಾದಾಗ ಹೊಟೆಲ್ಲು ಊಟಕ್ಕೆ ಬರುವಂತೆ ಇವು ಕೋರಾಣಭಿಕ್ಷಕ್ಕೆ ರಸ್ತೆಗೆ ಬರಬಹುದೇನೋ?

ಇದೇ ಬಗೆಯ ಅಪಾಯವೂ ಪುದುತೋಟಂ ಮತ್ತು ವಾಲ್ಪರೈಯಲ್ಲೂ ಆಗುತ್ತಿದೆ ಎಂಬುದು ನಮಗೆ ಬೇಗ ಮನದಟ್ಟಾಯಿತು. ನಮ್ಮ ಫೋಟೊಗಿಂತ ಅವುಗಳ ಬದುಕು ಮುಖ್ಯವೆಂದು ಸುಮ್ಮನೆ ಅವುಗಳ ಆಟ ನೋಡುತ್ತಾ ನಿಂತೆವು. ನಾವು ಪಕ್ಕಾ ಜಿಪುಣರೆಂಬುದು, ಯಾವುದೇ ತಿಂಡಿ ಕೊಡದ ಬೇಜವಾಬ್ದಾರಿ ಜನರೆಂದು ಅರಿತ ಸಿಂಹಬಾಲದ ಕೋತಿಗಳು ರಸ್ತೆಯಿಂದ ಕೊಂಚ ದೂರ ಸರಿದು ಕಾಡಿಗಿಳಿದವು. ಆಗ ವಾಚರ್ "ಮುಂದೆ ಹಳ್ಳ ಹರಿಯುವ ಜಾಗವಿದೆ. ಅಲ್ಲಿನ ಮರಗಳ ಮೇಲೆ ಅವು ಈಗ ಹೋಗಿ ಕೂರುತ್ತವೆ. ಅಲ್ಲಿಗೆ ಹೋಗಿ ಪಟ ತೆಗೆದುಕೊಂಡು ಬೇಗ ಹೋಗು" ಎಂದು ನನ್ನ ಪೆಚ್ಚುಮುಖ ನೋಡಿ ಹೇಳಿದನು. "ಅಂತೂ ಛಾನ್ಸೊಂದು ಸಿಕ್ಕಿತಲ್ಲಾ" ಎಂದು ಖುಷಿಯಿಂದ ಅತ್ತ ಕಡೆ ಹೋದಾಗ ಅವುಗಳ ದರುಶನ ಭಾಗ್ಯ ಸಿಕ್ಕಿತು. ನಮ್ಮ ರೆಗ್ಯೂಲರ್ ಮಂಗಗಳ ತರಹ ಆಕ್ರಮಣಶೀಲವಲ್ಲದ ಸೌಮ್ಯ ಸ್ವಭಾವದ ಆ ಕೋತಿಗಳು ನಮ್ಮನ್ನು ಕರುಣೆಯ ಕಂಗಳಿಂದ ಗಮನಿಸಿದವು. ಅಳಿದುಹೋಗುತ್ತಿರುವ ಈ ಸಂತತಿಗಳನ್ನು ಹೇಗೆ ಉಳಿಸಿಕೊಳ್ಳಬೇಕೆಂಬ ನಿಖರ ಸತ್ಯ ಗೊತ್ತಿರುವುದು ನಮ್ಮ ಪ್ರಕೃತಿಮಾತೆ ಒಬ್ಬಳಿಗೇನೆ. ಅವಳೇ ಕಾಪಾಡಬೇಕು.

●